ಶ್ರೀರಂಗಪಟ್ಟಣದ ತಾಲ್ಲೂಕು ಆಫ್ಟಿಂಗ್ ಡೆಪ್ಯುಟಿ ಅಮಲ್ದಾರ್ ಡಿ. ಸುಬ್ಬರಾಯರು ಸದರೀ ವೆಂಕಟರಾಯರು ರಜಾದ ಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಕೃಷ್ಣರಾಜಪೇಟೆ ತಾಲ್ಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ಮೊಕರರ್ರಾಡಲ್ಪಟ್ಟಿರುತ್ತಾರೆ.

ಮೈಸೂರ್, ತಾರೀಖು 18ನೇ ಏಪ್ರೆಲ್ 1896.

ನಂ. 9474.—ಫಾ. ಫೈ. 91—95, ಷಿಕಾರಿಪುರದ ಫಾರಸ್ಟ್ ಸಬ್ ಡಿವಿಜ್ ಫಾರಸ್ಟ್‌ಗಳ ಅಸಿಸ್ಟೆಂಟ್ ಕ್ಯೂರೇಟರ್ ಮೆಸ್ಸರ್ ಬಿ. ಶ್ರೀನಿವಾಸರಾಯರಿಗೆ 1896ನೇ ಏಪ್ರೆಲ್ 10ನೇ ವರ್ತುಂ 9316.—ಫಾ. ಫೈ. 91—95ನೇ ನಂಬರ್ ಇನ್ಸ್ತಿಹಾರ್‌ನಾಮೆ ಯಲ್ಲಿ ಮಿಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಸ್ರೊಂದು ತಿಂಗಳ ರಜಾವನ್ನ ಎಡು ತಿಂಗಳ ಪರಿಯಂತ ಜಾಸ್ತೀ ಮಾಡಲ್ಪಟ್ಟಿರುತ್ತೆ.

ಫಾರಸ್ಟ್‌ಗಳ ಯಕ್ಟಿಂಗ್ ಅಸಿಸ್ಟೆಂಟ್ ಕ್ಯೂರೇಟರ್ ಮೆಸ್ಸರ್ ಮಾಂಟೀರೊ ಯವರು ಸದರೀ ಮೆಸ್ಸರ್ ಬಿ. ಶ್ರೀನಿವಾಸರಾಯರು ರಜಾದಮೇಲೆ ಗೈರ್ ಹಾಜರಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಷಿಕಾರಿಪುರದ ಫಾರಸ್ಟ್ ಸಬ್ ಡಿವಿಜ್ ಚಾರ್ಜಿನಲ್ಲಿ ಯಿರತಕ್ಕದ್ದು.

ಮೊಕ್ಕಾಂ ಮೈಸೂರ್, ತಾರೀಖು 25ನೇ ಏಪ್ರೆಲ್ 1896.

ನಂ. 9575.—ರೆ. 3696, ಮೈಸೂರ್ ಸರ್ವಿಸ್ ರೆಗ್ಯುಲೇಷ್ಯನ್‌ಗಳ 172ನೇ ಆರ್ಟಿಕಲ್ ಅನುಸರಿಸಿ, ತಿರುಮಕೂಡು ನರಸೀಪುರದ ತಾಲ್ಲೂಕು ಅಮಲ್ದಾರಾಯರ ಜೆ. ಹನುಮಂತರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಹದಿನೈದು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕು ಶರಸ್ತೇದಾರು, ಸದರೀ ಜೆ. ಹನುಮಂತರಾಯರು ರಜಾದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು.

ಹುಕುಂ ಬಮೋಜಿಬ್,
ಸಿ. ಶ್ರೀನಿವಾಸಯ್ಯಂಗಾರ್ ಜನರಲ್ ವ ರವಿನ್ಯೂ,
ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಮಿಲಿಟರಿ:

ಇನ್ಸ್ತಿಹಾರ್‌ನಾಮಾ.

ತಾರೀಖು 21ನೇ ಏಪ್ರೆಲ್ 1896.

ಕೆಷ್ಟ್ ಮೇಲೆ ನಿವೃತ್ತರಾದ ಕಮಾಂಡೆಂಟ್ ರಾಮರಾವ್ ರಣಾವರೆ, ಆರ್. ಬಿ. ಯವರಿಗೆ ಬದಲಾಗಿ ರಿಸಾಲ್ದಾರ್ ಕೃಷ್ಣರಾಯರನ್ನು 1896ನೇ ಏಪ್ರೆಲ್ 11ನೇ ವರ್ತುಂ ಲಾಗಾಯತು ಮೈಸೂರ್ ಸವಾರ್ ಲೋಕಲ್ ಸರ್ವಿಸ್ 1ನೇ ರೆಜಿಮೆಂಟ್ ಕಮಾಂಡೆಂಟ್ ರಾಗಿ ಘನವನ್ನು ಹೊಂದಿದ ಶ್ರೀಮತ್ ಮಹಾರಾಜ್ಞೀ ರೀಜಂಟ್, ಸಿ. ಐ., ಯವರು ಮೊಕರರ್ ಮಾಡಿರುತ್ತಾರೆ.

ಮೈಸೂರ್ ಸವಾರ್ ಲೋಕಲ್ ಸರ್ವಿಸ್ 1ನೇ ರೆಜಿಮೆಂಟಿನಲ್ಲಿ ಇದರಡಿ ಕಂಡ ಬಡ್ತಿಗಳು 1896ನೇ ಏಪ್ರೆಲ್ 16ನೇ ವರ್ತುಂ ಲಾಗಾಯತು ಮಾಡಲ್ಪಟ್ಟಿರುತಕ್ಕೆ:—

ಹೆಸರು.	ಹುದ್ದೆಯಿಂದ.	ಹುದ್ದೆಗೆ.	ಷರಾ.
ಮಹಮ್ಮದ್ ಅಲ್ಲಿ ..	ಜಮಾದಾರ್ ..	ರಿಸಾಲ್ದಾರ್, ನಾಲ್ಕನೇ ಗ್ರೇಡ್	ಕೆಷ್ಟ್‌ಮೇಲೆ ನಿವೃತ್ತರಾದ ರಿಸಾಲ್ದಾರ್ ತಿಮ್ಮಾಜಿ ಯಲೆಯವರಿಗೆ ಬದಲಾಗಿ.
ಸಯ್ಯದ್ ಫಕ್ರುದ್ದಿನ್ ..	ದಫಾದಾರ್ ..	ಜಮಾದಾರ್	ಬಡ್ತಿ ಮಾಡಲ್ಪಟ್ಟ ಜಮಾದಾರ್ ಮಹಮ್ಮದ್ ಅಲ್ಲಿಯವರಿಗೆ ಬದಲಾಗಿ.

ಹುಕುಂ ಬಮೋಜೀಬ್,
ಏ. ಯಚ್. ವೆಕ್ಟ್‌ಬಟ್ಟೈರ್, ಲೆ. ಕರ್ನಲ್,
ಮಿಲಿಟರಿ ಸೆಕ್ರೆಟರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 1086. ಮೊಕ್ಕಾಂ ಮೈಸೂರ್, ತಾರೀಖು 16ನೇ ಏಪ್ರೆಲ್ 1896.

ಇದರಡಿ ಕಂಡವ್ಯಕ್ತಿಗಳು ದಾವಣಗೆರೆ ತಾಲ್ಲೂಕು ಕಡ್ಲಬಾಳೆ ಆಂಜನೇಯಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ:—

1. ವಾ॥ ರಾ॥ ಕಡ್ಲಬಾಳೆ ಶಾನುಭೋಗರಾದ ನರಸಿಂಗರಾಯರು.
2. ಡಿಟೋ ಕಡ್ಲಬಾಳೆದ ಗುರುವಣ್ಣಯ್ಯರು.
3. ಡಿಟೋ ಡಿಟೋ ಪಟೇಲ ಚನ್ನಪ್ಪನವರು.

ಹುಕುಂ ಬಮೋಜೀಬ್,
ಏ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೆಕ್ರೆಟರಿ.